1996-97 (Jan)

AJJA UNDATED

ಅಜ್ಜ – ಈಗ ನಿಮ್ಮ ಜೀವನದಲ್ಲಿ ಬಂಧನ ಏನಾದರೂ ಸಂಭವಿಸಿದ್ದು, ನಿಮಗೆ ಸ್ವಲ್ಪ ಪ್ರಾಯ ಕೇಳ್ಬಹುದಲ್ಲ, ಉಂಟಾ ಇಲ್ಲ.

ಒಬ್ಬರು – ಇಲ್ಲ.

ಅಜ್ಜ – ಏನಾದರೂ ಬಂಧನ ಸಂಭವಿಸಿದ್ದುಂಟಾ ನಿಮ್ಮ ಜೀವಮಾನ ಕಾಲದಲ್ಲಿ?

ಒಬ್ಬರು – ಇಲ್ಲ.

ಅಜ್ಜ – ಇಲ್ಲ, ಇಲ್ಲ, ಏನಿಲ್ಲ.

ಒಬ್ಬರು – ಆದ್ರೂ ನಾವು ಬಂಧನದಲ್ಲೇ ಇದ್ದೇವೆ.

ಅಜ್ಜ – ಇಲ್ಲ. ನಾವು ಬಂಧನದಲ್ಲಿಲ್ಲ. ಇಲ್ಲ.

ಶಾ – ಜನ್ಮ ಅನ್ನುವ ಬಂಧನ ಇದೆಯಲ್ಲ. ನಮಗೆ ಗೊತ್ತಿದೆಯಲ್ಲ. ಸುಖ–ದುಃಖ, ನೋವು–ನಲಿವು ಆಗ್ತಾ ಇದೆಯಲ್ಲ. ಇದು ಬಂಧನ ಅಲ್ವಾ?

ಅಜ್ಜ – ಹಾಗಾದರೆ ನೀವು ಬಿಡುಗಡೆಗೆ ಪ್ರಯತ್ನ ಮಾಡಿದ್ದೀರಾ?

ಶಾ – ಮಾಡ್ತಾ ಇದ್ದೇವೆ.

ಅಜ್ಜ – ಮಾಡ್ತಾ ಇದ್ದೀರ? ಸರಿ, ಮಾಡ್ತಾ ಇದ್ದೇವೆ ಅಂದ್ರೆ . . .

ಸು – ನಿಜವಾಗಿಯೂ ನಾವು ಬಂಧನದಲ್ಲಿದ್ದಿದ್ರೆ ನಾವು ಬಿಡುಗಡೆಗೆ ದಾರಿ ನೋಡ್ತಿದ್ವಿ. ನಾವು ಬಿಡುಗಡೆಗೆ ಪ್ರಯತ್ನ ಮಾಡಿಲ್ಲ ಅಂದ್ರೆ, ನಾವು ಬಂಧನದಲ್ಲಿದ್ದೇವೆ ಅಂತ ಕೂಡ ನಮಗೆ ಗೊತ್ತಿಲ್ಲ.

ಶಾ – ಪ್ರಯತ್ನ ಒಮ್ಮೆಲೇ ಆಗುವುದಿಲ್ವಲ್ಲ ಯಾವುದಾದ್ರೂ.

ಸು – ಬಂಧನದಲ್ಲಿದ್ದೇವೆ ಅಂತ ಕೂಡ ನಮಗೆ ಗೊತ್ತಿರಲಿಕ್ಕಿಲ್ಲ.

ಅಜ್ಜ – ಬಂಧನದಲ್ಲಿದ್ದೇವೆ ಅಂತ ಗೊತ್ತಾದರೆ ತತ್‌ಕ್ಷಣ ಪ್ರಾರಂಭ. ಆದಕ್ಕೆ ಒಂದು ಸೆಕೆಂಡು ಪುರುಸೊತ್ತಿಲ್ಲ.

ಶಾ – ಪ್ರಾರಂಭ ಮಾಡಿದರೂ ಸಹ, ಅದು ಒಂದೇ ದಿವಸದಲ್ಲಿ ಆಗುವಂಥದ್ದಲ್ಲ. ಬಂದನದಲ್ಲಿದ್ದೇವೆ ಅಂತ ತಿಳಿದ ತತ್‌ಕ್ಷಣದಲ್ಲಿ ಪ್ರಾರಂಭ ಮಾಡ್ತೇವೆ. ಅದು ಒಂದೇ ದಿವಸದಲ್ಲಿ ಆಗುವುದಾ? ಒಂದು ಘಳಿಗೆಯಲ್ಲಿ ಆಗುವುದಾ?

ಅಜ್ಜ – ಒಂದು ಘಳಿಗೆಯಲ್ಲ, ಆ ಜನ್ಮದಲ್ಲಿ ಆಗುವುದು.

ಶಾ – ಒಂದು ಜನ್ಮ ಆದರೂ ಬೇಕು, ಮೂರು ಜನ್ಮ ಆದರೂ ಬೇಕಾಗಬಹುದು. ನಮ್ಮ – ಹೋಗುವವರ ಗತಿಯ ಮೇಲೆ ಆವಲಂಬಿಸಿದೆ. ಕೆಲವರು ನಿಧಾನವಾಗಿ ಹೋಗ್ತಾರೆ, ಕೆಲವರು ಬೇಗ ಹೋಗ್ತಾರೆ.

ಅಜ್ಜ – ಊಂ!

ಸುಧಾ – ನಾವು ಇಷ್ಟೊಂದು ಕಷ್ಟದಲ್ಲಿದ್ದರೂ, ನಾವು ಬಂಧನದಲ್ಲಿದ್ದೇವೆ, ಇದರಿಂದ ಪಾರಾಗಬೇಕು ಅಂತ ಆ ಒಂದು ಇದು ಬರ್ಬೇಕಾದ್ರೂ, ಎಷ್ಟು ಜನಕ್ಕೆ ಬರ್ತದೆ ಅದು?

ಶಾ – ಬರೋದು ಕಷ್ಟ.

ಅಜ್ಜ – ಹೊರಗಿನ ಕವಚ. ಆ ಒಳಗಿದ್ದನ್ನು ಮತ್ತೊಂದಕ್ಕೆ.
ಅದೇ ತೂತಾಗಿಬಿಟ್ರೆ? ಹೊರಗಿನದ್ದು ಅಷ್ಟು ಒಳ್ಳೇದುಂಟು.
ಅದೇ ಜೀವನ್ಮುಕ್ತ ಅಂತ್ಹೇಳಿ ಅದರ ಲಕ್ಷಣಗಳು.

XXXXX

ಅಜ್ಜ – ನಾವು ಎಲ್ಲೆಲ್ಲಿ ಹೋದದ್ದು ಇವತ್ತು.

ಸು – ಸಿ.ವಿ.ರಾಮನ್ ನಗರಕ್ಕೆ.

ಅಜ್ಜ – ಹೌದು, ಅಲ್ಲಿಂದ ಮತ್ತೆ ಇಲ್ಲಿಗೆ.

ಶಾ – ಅಮೃತಧಾಮ.

ಸು – ಎಲ್ಲಿ ಅದು ಅಮೃತಧಾಮ?

(ಎಲ್ಲರಿಗೂ ಪಾಯಸ ಕೊಟ್ಟು, ಎಲ್ಲರೂ ತಿನ್ನುತ್ತಿರುವಾಗ)

ಸು – ನೀವು ಚೆನ್ನಾಗಿ ಅಡಿಗೆ ಮಾಡ್ತೀರಂತಲ್ಲ ಅಜ್ಜ. ಅನಿಲ್ ಹೇಳ್ತಾ ಇದ್ರು ನೀವು ನೆಟ್ಟಾರಿನಲ್ಲಿ ಉಪ್ಪಿಟ್ಟು ಮಾಡಿ ತಿನ್ಸಿದ್ರಂತೆ.

ಅಜ್ಜ – ಊಟ ಮಾಡುವವನಿಗೆ ಅಡಿಗೆ ಮಾಡುವುದು ಗೊತ್ತು ಬೇಕು. ಬಾಯಲ್ಲಿ ಹೇಳುವುದಲ್ಲ. ಊಟ ಮತ್ತು ಅಡಿಗೆ ಪ್ರತಿಯೊಂದು ನಮ್ಮ ಜೀವನದಲ್ಲಿ ಬರ್ಬೇಕು. ಈಗ ನಾವು ಮಾತಾಡ್ತಿರುವ ಪ್ರತಿಯೊಂದು ನಮ್ಮ ಜೀವನದಲ್ಲಿ ಬಂದ ವಿಚಾರ ಆದ್ರಿಂದ ನಮಗೆ ಹೇಳ್ಲಿಕ್ಕೆ ರೈಟ್ ಉಂಟು, ಇಲ್ದಿದ್ರೆ ರೈಟ್ ಇಲ್ಲ. ನೋಡಿ ಅಲ್ಲಿ ಹೇಳಿ ಆಯ್ತು. ನಾವು ಪ್ರವಚನಕಾರರಲ್ಲ, ಭಾಷಣಕಾರರಲ್ಲ, ಮತ್ತೆ ಹೇಳಿ, ನಮಗೆ ಬರ್ಬೇಕು ಒಂದೊಂದು ಎಲ್ಲಿಂದ.

ಸು – ಉಪನ್ಯಾಸಕಾರರಲ್ಲ.

ಅಜ್ಜ – ಉಪನ್ಯಾಸಕಾರರಲ್ಲ.

ಸು – ಅನುಭವದಲ್ಲಿ ಸಂಭವಿಸಿದ್ದನ್ನ ಹೇಳೋದು.

ಅಜ್ಜ – ಹಾಗಾದ್ರೆ ಒಂದೈದು ನಿಮಿಷ ಮಾತಾಡ್ಲಿಕ್ಕೆ . . . ಇದು ಹ್ಯಾಗೂ ಇಲ್ಲ. ಅದಕ್ಕೆ ಆಧಾರವಾಗಿ ಒಂದು ಇದೆ. ಶಿವೋಹಂ.

ಸು – ಚಿದಾನಂದ ರೂಪಃ ಶಿವೋಹಂ ಶಿವೋಹಂ.

ಅಜ್ಜ – ಏನಂತ ಹೇಳ್ತದೆ ಅದರಲ್ಲಿ?

ಸು – ನಾನೇ ಆನಂದ ಸ್ವರೂಪಿ.

ಅಜ್ಜ – ನಾನು ಯಾವುದೂ ಅಲ್ಲ ಅಂತ ಹೇಳ್ತದೆ.

ಒಬ್ಬರು – ಅಹಂ ನಿರ್ವಿಕಲ್ಪೋ ನಿರಾಕರರೂಪೋ

ಅಜ್ಜ – ಅದು ನಿಮ್ಮ ಜೀವನದಲ್ಲಿ ಆಚರಣೆಗೆ ಬರ್ಲಿ. ಅದು ಅಲ್ಲವಾದ್ರೆ ಹೆಳ್ಲಿಕ್ಕೆ ನಮಗೆ ಸ್ವಲ್ಪ . . .
ಆದರೆ ಆಚರಣೆಗೆ ಬರ್ಬೇಕು ಅಂತ್ಹೇಳಿ ಅಷ್ಟೇ. ಬರ್ಲಿಕ್ಕೆ ಏನಾಗಬೇಕು? ಅನುಭವ ಬರ್ಲಿಕ್ಕೆ ಏನಾಗ್ಬೇಕು?

ಒಬ್ಬರು – ಒಳಗಡೆ ಶೋಧನೆ ಮಾಡ್ಬೇಕು.

ಸು – ಖಾಲಿಯಾಗ್ಬೇಕು ಅಜ್ಜ.

ಒಬ್ಬರು – ಖಾಲಿಯಾಗಿ ಶೋಧನೆ. ನಾನೇ ಅವನಾಗ್ಬೇಕು. ಅವನೇ ನಾನಾಗ್ಬೇಕು.

ಅಜ್ಜ – ಅಷ್ಟಾದರೆ ಆಯ್ತಾ? ಇನ್ನೂ ಮುಂದೆ ಹೋಗಿ. ಇನ್ನೂ ಮುಂದೆ ಹೋಗಿ. ಅಲ್ಲಿ ಖಾಲಿ ಆಗ್ಲಿಲ್ಲ.

ಒಬ್ಬರು – ನಿಮಗೆ ಒಂದು ಕೆಲಸ ಆಯ್ತಲ್ಲ.

ಅಜ್ಜ – ಆದ್ರೆ ಆಗ್ಲಿ ಕೆಲ್ಸ. ಏನೂ ತೊಂದ್ರೆ ಇಲ್ಲ ಅವರಿಗೆ. ಮಾಡ್ಲಿ ಅಲ್ಲ? (ಗುಂಪಿನಲ್ಲಿ ಮಾತುಕತೆ). ನಮ್ಮನ್ನು ನಾವು ಅರಿಯುವಂಥದ್ದೇ ಪರಮಾತ್ಮನನ್ನು ಅರಿಯುವಂಥದ್ದು. ಪರಮಾತ್ಮ ಎಂದರೆ ಯಾರೂ ಮಹತ್ವ ಕೊಡುವುದು ಬೇಡ ಅಂತ ನಾವು ಹೇಳ್ತದೆ. ಆ್ಞಂ! ನಾವು ಪರಮಾತ್ಮನಿಗೆ ಏನು ಮಾಡ್ತದೆ. ಹೀಗೆ ಮಾಡ್ತೇವಲ್ಲ. ಆ ಎರಡೂ ಕೈ ಹೀಗೆ ಅಲ್ವ? ಆ್ಞಂ! ನಿಮ್ಮ foundation ಸರಿ ಇಲ್ಲ. ಇಲ್ಲ. foundation ಸರಿ ಇದ್ರೆ, ಹೀಗೆ ಮಾಡೋದು ಬೇಡ, ಹೀಗೆ ಮಾಡ್ಬೇಕು ಒಳಗಿದ್ದಾನೆ ಅಂತ ಹೇಳಿ. ಆ್ಞಂ! ಮೊದ್ಲದು ಮಾಡಿಕೊಳ್ಬೇಕು ಈಗ. ನಮ್ಮನ್ನು ನಾವು ಅರಿಯುವಂಥಾದ್ದು. ಅದು ಆಗದಿದ್ದರೆ ಯಾವ ಪ್ರಾರ್ಥನೆಯೂ . . . ಆ್ಞಂ! ಎಲ್ಲವೂ ಹೋಯ್ತು. ಬರೇ . . . ಕಣ್ಮುಚ್ಚೋದು ಬೇಡ. ಆ್ಞಂ! ಕಣ್ಮುಚ್ಚಿದ್ರೆ ಕಾಣ್ತದೆ ಇನೊಬ್ಬನಿಗೆ ಇವ ಕಣ್ಮುಚ್ಚಿ ಧ್ಯಾನ ಮಾಡ್ತಾನೆ ಅಂತ್ಹೇಳಿ. ಬೇಡ ಕಣ್ಣು ಬಿಟ್ಟು ನಿಮ್ಮ ಕೆಲಸದಲ್ಲಿ ನಿರತನಾಗಿರುವಾಗ. ಹ್ಞಾಂ! ನಿಮ್ಮನ್ನು ನೀವು ನೋಡಿ. ಆ್ಞಂ! ಇದಕ್ಕೋಸ್ಕರ ಎಲ್ಲವೂ ಇರುವಂಥದ್ದು. ಮೊದ್ಲು ತಟಸ್ಥ. ಅದಕ್ಕೆ ಯಾವ ತತ್ವ ಸಿದ್ಧಾಂತಗಳೂ ಬೇಡ. ಅದು ಬರಹ ಗೊತ್ತಿಲ್ಲದಿದ್ದವರಿಗೂ ಇದು ಅಭ್ಯಾಸ ಮಾಡಲಿಕ್ಕೆ ಸಾಧ್ಯತೆ ಉಂಟು. ಅಕ್ಷರಾಭ್ಯಾಸ ಇಲ್ಲದಿದ್ದವರು, ಅಂದ್ರೆ ಹಳ್ಳಿಯ ಜೀವನದಲ್ಲಿದ್ದುಕೊಂಡು – ನೋಡಿ ನಾವು ಹಳ್ಳಿಯ ಜೀವನದಲ್ಲಿ ಇರುವವರು. ಮನಸ್ಸು ಖಾಲಿಯಾಗ್ಬೇಕು. ಆವಾಗ ಮಾತ್ರ ಈ ಮಾತುಗಳು ಅಲ್ಲಿ ಅಚ್ಚಾಗಲಿಕ್ಕೆ ಸಾಕು. ಆ್ಞಂ! ಮನಸ್ಸು ಖಾಲಿಯಾಗ್ಬೇಕು. ಅಲ್ಲ, ಮನಸ್ಸು ಅಂದ್ರೆ ಏನೂಂತ ಶೋಧನೆ. ಶೋಧನೆಗಿಳಿಯಲಿಕ್ಕೆ ಯಾರಿಗೂ ಕಷ್ಟಸಾಧ್ಯವಾದ ಕೆಲಸ ಅಲ್ಲ? ಆ್ಞಂ! ಕೆಲವರಿಗೆ ಅಗತ್ಯವೂ ಇಲ್ಲ. ಅಗತ್ಯ ಇದ್ದರೆ, ಕಷ್ಟ ಆದರೂ ಹೋಗಿಯೇ ಹೋಗ್ತಾನೆ ಅವ.

ಬೃಂದನ phone ಬಂದಿತ್ತಾ.

ಪ – ನಿನ್ನೆ ಬಂದಿತ್ತು. ಕೇಳ್ತಾ ಇದ್ರು ನೀವು ಯಾವಾಗ ಬರ್ತೀರಿ ಅಂತ. ನಾನು phone ಮಾಡಿದಾಗಲೆಲ್ಲ, ನಾವು ಮಾತಾಡಿದ್ದು, ನೀವು ಹೇಳಿದ್ದು ಅದು ಹೇಳ್ತಾ ಇರ್ತೀನಿ, ಕೇಳ್ತಾ ಇರ್ತಾರೆ. ನಮಗೆ ಎಷ್ಟರಮಟ್ಟಿಗೆ ಅದು ಅರ್ಥ ಆಗಿದೆಯೋ ಅದು ಹೇಳೋದು.

ಅಜ್ಜ – ನೀವು sweet ಕೊಟ್ಟಿದ್ದನ್ನು ನಾವು ಸ್ವೀಕಾರ ಮಾಡಿದ್ದಾಯ್ತು. ನೀವೂ ತೆಕೊಂಡಾಯ್ತು. ನಾವೂ ತೆಕೊಂಡಾಯ್ತು. ಆ್ಞಂ! ಹಾಗೆ ಇಲ್ಲಿಂದ ಬಂದ ಮಾತುಗಳನ್ನು, ನಾವು ಹೇಳಿದ ಮಾತುಗಳಲ್ಲ, ಇಲ್ಲಿಂದ ಬಂದ ಮಾತುಗಳನ್ನು ನೀವು ಎಷ್ಟರಮಟ್ಟಿಗೆ ತೆಕೊಂಡಿದ್ದೀರಿ, ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರ್ತೀರಿ ಅಂತ್ಹೇಳಿ ನಿಮಗೆ ಬಿಟ್ಟ ವಿಚಾರ. ಉ್ಞಂ! ಅಂದ್ರೆ ನಿಮ್ಮೊಳಗೆ ಇದ್ದದ್ದನ್ನು ಹೆಕ್ಕಿ ತೆಗೆದು ಇದು ಹಾಕಿದ್ದಾಯ್ತು. ಇದಕ್ಕೊಂದು ಕೆಲ್ಸ. ಆದ್ದರಿಂದ ಮೋಹಕ್ಕೆ ಮಹತ್ವ ಕೊಡೋದು ಬೇಡ. ದೇಹಕ್ಕೆ ಮಹತ್ವ ಕೊಟ್ಟಾಗ, ಬಾಹ್ಯ ಮನಸ್ಸಿಗೆ . . . ಅದು ಅಲ್ಲಿ ಮಾತಾಡಿಯಾಯ್ತು. ಎಲ್ರೂ ನಾವು ನಿದ್ರೆಯಲ್ಲಿದ್ದೇವೆ ಅಂತ್ಹೇಳಿ ಒಂದು ಮೂರು ದಿನ ಇತ್ತಲ್ಲಿ. ಯಾವುದು? (D.R)

ನಿದ್ರೆಯಲ್ಲಿದ್ದವರನ್ನು ಎಚ್ಚರಿಸಲಿಕ್ಕೆ ನಾವು ಬಂದಿದ್ದೇವೆ. ಮುಗಿತಲ್ಲ. ಆ್ಞಂ! ಅಷ್ಟೇ ಚಿತ್ರಣ. ನಿದ್ರೆ ಅಂದ್ರೆ ಆ ಸ್ವಪ್ನಕ್ಕೆ ಇದು ಎಚ್ಚರಿಕೆ. ಇನ್ನೊಂದು ಅವಸ್ಥೆಗೆ ಇದು ನಿದ್ರೆ. ಆ ಎಚ್ಚರವಾಗದಿದ್ರೆ, ನಮ್ಮ ಮನುಷ್ಯಜನ್ಮ ಎಂಬುದು, ನಾವು ಇಡೀ ಕಂಠೋಕ್ತ ಹೇಳ್ತದಪ್ಪ.
ಎಚ್ಚರಿಕೆ ಆದಾಗ ಅವನಿಗೆ ತಿಳಿದು ಬರ್ತದೆ ನಾನು ಯಾರು ಅಂತ್ಹೇಳಿ. ಆ್ಞಂ! ಸೂಕ್ಷ್ಮ ಮತ್ತು ಕಾರಣದ ವಿಚಾರ – ಸೂಕ್ಷ್ಮದೇಹ ಅಂದರೆ ಮನಸ್ಸು. ಮನಸ್ಸು ವಿಕಾಸಗೊಳ್ಳಬೇಕು. ಅರಳಬೇಕು. ಸೂಕ್ಷ್ಮದೇಹ ವಿಕಾಸವಾದಾಗ ಮಾತ್ರ ಕಾರಣದೇಹವನ್ನು ವಿಕಾಸಪಡಿಸಲಿಕ್ಕೆ ಸಾಧ್ಯ. ಜೀವಾತ್ಮನ ಅಂತಿಮ ಸ್ಥಿತಿ. ಪ್ರಪಂಚಕ್ಕೆ ಇದೆಲ್ಲ ಬೇಡ ಅಲ್ಲ? ನಾವು ಪ್ರಪಂಚವನ್ನು ಒಪ್ಪಿ ಆಗಿದೆ ಅಲ್ವ? ಆದ್ದರಿಂದ ಪರಮಾತ್ಮನನ್ನು ಒಪ್ಪಲೇ ಬೇಕು. ಪ್ರಪಂಚ ಎಷ್ಟು ಸತ್ಯವೋ, ಅಷ್ಟೇ ಸತ್ಯ ಪರಮಾತ್ಮ. ಅವನನ್ನು ಒಪ್ಪಲೇ ಬೇಕು. ನಾವು ದೇಹವನ್ನು ಒಪ್ಪಿ ಆಗಿದೆ. ಪ್ರಪಂಚವನ್ನು ಒಪ್ಪಿ ಆಗಿದೆ. ಪರಮಾತ್ಮನನ್ನು ಒಪ್ಪಿ ಆಗಿದೆ. ಆ್ಞಂ! ಅಲ್ವ? ನಾವು ದೇಹವನ್ನು ಒಪ್ಪಿ ಆಗಿದೆ. ಪ್ರಪಚವನ್ನು ಒಪ್ಪಿದ್ದೇವೆ. ದೇಹವನ್ನು ಒಪ್ಪಿದ ಮೇಲೆ ಪ್ರಪಂಚವನ್ನು ಒಪ್ಪಲೇ ಬೇಕು. ಪ್ರಪಂಚವನ್ನು ಒಪ್ಪಿದ ಮೇಲೆ ಪರಮಾತ್ಮನನ್ನು ಒಪ್ಪಲೇ ಬೇಕು. ಒಪ್ಪಲೇ ಬೇಕು. ಇದು ಸತ್ಯ. ಆ್ಞಂ! ಈ ಸತ್ಯವು ಅಸತ್ಯವಾಗಿ ಸಂಭವಿಸಿದಾಗ ಮಾತ್ರ ಸತ್ಯದ ಅರಿವು. ಸಾವಿನಾಚೆಗಿನ ದ್ವಂದ್ವಾತೀತವಾದ ಬದುಕಂದ್ರೆ ಇದು. ಅದಕ್ಕಾಗಿ ಇದಕ್ಕೆ ಪ್ರಾಧಾನ್ಯತೆ ಕೊಡ್ಬೇಕು. ಇಲ್ಲೇನಿಲ್ಲ. ಅಂದ್ರೆ ಇದು ಅಸತ್ಯ. ಅದನ್ನು ನಾವು ಸತ್ಯ ಅಂತ್ಹೇಳಿ ಭಾವಿಸಿದ್ದೇವೆ. ಭಾವಿಸಿದ್ದೇವೆ. ಭಾವಿಸಿದ ಸತ್ಯವು ಅಸತ್ಯವಾಗಿ ಸಂಭವಿಸಿದಾಗ ಸತ್ಯದ ಅರಿವು. ಅದಕ್ಕಾಗಿ ನಮ್ಮ ಜನ್ಮ ಆಯಿತು. ಯಾರದು? ಅದಕ್ಕಾಗಿ ನಮ್ಮ ಜನ್ಮ ಆಯಿತು. ಯಾರದು?

ಒಬ್ಬರು – ನಮ್ಮದು.

ಅಜ್ಜ – ಹ್ಞಾಂ! ಜನ್ಮವಾಯಿತು ಯಾಕೆ? ಜನ್ಮದಿಂದ ಬಿಡುಗಡೆಗಾಗಿ ಜನ್ಮವಾಯಿತು. ನೋಡಿ ಬ್ರಹ್ಮಚೈತನ್ಯಮಹಾರಾಜರು ಪುಸ್ತಕ ಇಷ್ಟು ದಪ್ಪ ಉಂಟಲ್ಲ? ಉಂಟಲ್ಲ? ಒಂದೇ ಒಂದು ಶಬ್ದವನ್ನು ಆಚರಣೆಗೆ ತನ್ನಿ, ಅದು ಹೇಳ್ತದಲ್ಲ ಹಾಗೆ. ಒಂದೇ ಒಂದು ಶಬ್ದವನ್ನು ಆಚರಣೆಗೆ ತನ್ನಿ ಅಂತ ಹೇಳ್ತದೆ. ಆದರೆ ನಮಗೆ ಆಚರಣೆಗೆ ತರ್ಲಿಕ್ಕೆ ಬಹಳ ಕಷ್ಟ ಆದೀತು, ಒಂದು ಸೆಕೆಂಡು ಪುರುಸೊತ್ತು, time ಇಲ್ಲ. ಮನಸ್ಸು ತಟಸ್ಥವಾಗಿದ್ದರೆ, ಎಲ್ಲ ಸಾಧ್ಯ. ಅದಕ್ಕೆ ನಿಶ್ಶಬ್ದದಿಂದ, ಮನಸ್ಸನ್ನು ತನ್ನ ಮೂಲದಲ್ಲಿ ನಿಲ್ಲಿಸುವಂಥದ್ದು. ಬುದ್ಧಿಯಲ್ಲಿ ಒಂದಾದ ಮನಸ್ಸಿಗೆ ಇದೆಲ್ಲ ಗೋಚರ. (D.R.)

ಸುಲಭ. ಆ್ಞಂ! ಇದು ಬಹಳ ಸುಲಭ. ಆಸೆಯೇ ದುಃಖಕ್ಕೆ ಕಾರಣ. ಅದು ಜನ್ಮಕ್ಕೆ ಕಾರಣ. ನಾವು ಯಾಕೆ ಜನ್ಮಕ್ಕೆ ಬಂದದ್ದು ಇಷ್ಟೇ ಆಲೋಚನೆ ಮಾಡಿದರೆ ಸಾಕು. ಬೇರೆ ಏನೂ ಇಲ್ಲ. ಆದ್ರೆ ಆಲೋಚನೆ ಮಾಡ್ಲಿಕ್ಕೆ ಅಂಥ ಸನ್ನಿವೇಶ ಬರಬೇಕು. ಇಲ್ಲದಿದ್ರೆ ಆಗುವುದಿಲ್ಲ. ನಾವಾಗೇ ಮಾಡಿದರೆ ಅದು ಆಗೋದಿಲ್ಲ. ನಾವು ಸನ್ನಿವೇಶವನ್ನು ಕಲ್ಪಿಸಿಕೊಂಡ ಹಾಗಾಯ್ತು. ಅದು ಕಲ್ಪನೆಯೇ ಆಯ್ತು. ಆಂಥ ಸನ್ನಿವೇಶಗಳು ಜೀವನದಲ್ಲಿ ಒದಗಿ ಬಂದಾಗ ಅಲ್ಲಿಂದ ಪ್ರಾರಂಭ, ಪ್ರತಿಯೊಬ್ಬರಿಗೂ ಆದದ್ದು ಹಾಗೇ. ಅಷ್ಟರವರೆಗೆ ತಯಾರಿ ಇವ ಆಗ್ಬಹುದು. ತಯಾರಾದಾಗ ಸನ್ನಿವೇಶ ಬರ್ತದೆ. ಶೋಧನೆ ಎಂದರೆ ದೇಹದಲ್ಲಿರುವವನು ಈ (ಪರಮಾತ್ಮನ) ಶೋಧನೆ. ಬಾಕಿದ್ದು ಅದು ವಿಜ್ಞಾನಕ್ಕೆ ಬಿಟ್ಟದ್ದು ಅದು. ದೇಹದ ಶೋಧನೆ. ದೇಹದ ಮೂಲವಾದ ಭೂಮಿಯ ಶೋಧನೆ. ಪಂಚಭೂತಗಳ ಶೋಧನೆ ವಿಜ್ಞಾನಿಗಳಿಗೆ ಬಿಟ್ಟದ್ದು. ಇದು ಯಾವುದೂ ಅಲ್ಲ. ಕಾರಣ ದೇಹದ ಶೋಧನೆ. ಕಾರಣದೇಹದ ಶೋಧನೆ ಮಾಡ್ಬೇಕಾದ್ರೆ, ಸೂಕ್ಷ್ಮವು ಪರಿವರ್ತನೆ ಹೊಂದಬೇಕು. ಅದು ಸೂಕ್ಷ್ಮದ ಇದು ಆದಾಗ ಮಾತ್ರ ಕಾರಣದ ಇದು ಆಯ್ತು. ಅಷ್ಟೇ ಕೆಲಸ ಆಯ್ತು. ಇದಕ್ಕೋಸ್ಕರ ನಮ್ಮ ಈ ಬುದ್ಧಿಶಕ್ತಿ ಕೊಟ್ಟದ್ದು ಯಾಕಾಗಿ? ಬುದ್ಧಿಶಕ್ತಿ ಕೊಟ್ಟಿದಾನೆ. ಯಾಕೆ?

ಒಬ್ಬರು – ಸೂಕ್ಷ್ಮ ದೇಹದ ಪರಿವರ್ತನೆ ಮಾಡುವುದಕ್ಕಾಗಿ.

ಅಜ್ಜ – ತನ್ನನ್ನು ತಾನು ಅರಿಯಲಿಕ್ಕಾಗಿ. ತನ್ನನ್ನು ತಾನು ಅರಿಯುವಂಥಾದ್ದೇ ಪರಮಾತ್ಮನನ್ನು ಅರಿಯುವಂಥಾದ್ದು. ಗಂಟೆ?

ಸು – ೭ಕ್ಕೆ ೫ ನಿಮಿಷ ಉಂಟು ಅಜ್ಜ.

ಅಜ್ಜ – ಉ್ಞಂ! ಮಂಜುಳ ಎಲ್ಲಿಗ್ಹೋದ್ಲು? ಶಾಂತ? ಏನು ಮರೆತ್ಹೋಯ್ತಪ್ಪ?

ಶಾ – ಅಜ್ಜ!

ಅಜ್ಜ – ಪ್ರಾರ್ಥನೆ.

ಶಾ – ಹ್ಞೂಂ.

ಪ್ರಾರ್ಥನೆ (ಎಲ್ಲರೂ ಒಟ್ಟಾಗಿ)

ಶ್ರೀರಾಮ ಜಯರಾಮ ಜಯಜಯರಾಮ.

*****